ಮಾಡುವುದು ಸರ್ಕಾರಗಳಿಗೆ ಸಿಗುವ ಸುಲಭೋಪಾಯ. ಆದರೆ, ಭಿನ್ನಾಭಿಪ್ರಾಯದ ದನಿಗಳ ಪ್ರಾಮುಖ್ಯತೆಯನ್ನು ಚಾಮ್‌ಸ್ಕಿ ಪದೇ ಪದೇ ಎತ್ತಿ ಹಿಡಿಯುತ್ತಾರೆ.



ನಾಮ್ ಚಾಮ್‌ಸ್ಕಿ

ಭಿನ್ನಾಭಿಪ್ರಾಯವನ್ನು ತಳ್ಳಿಹಾಕುವ ಪ್ರಕ್ರಿಯೆಯೂ ಗಮ್ಮತ್ತಿನದ್ದು. ಜನಸಾಮಾನ್ಯರಿಂದ ಯಾವುದೇ ಭಿನ್ನ ದನಿ ಬಂದರೂ ಅದನ್ನು ತಳ್ಳಿಹಾಕುವುದೇ ಮೊದಲ ಪ್ರತಿಕ್ರಿಯೆಯಾಗುತ್ತದೆ. ಸಾಮಾನ್ಯವಾಗಿ ಯಾವುದೇ ವಿಷಯವನ್ನು 'ತಜ್ಞ'ರ ಸುಪರ್ದಿಗೆ ಒಡ್ಡಿ, ಅವರ ವಾದವನ್ನು ಮುಂದಿಟ್ಟು ಶ್ರೀಸಾಮಾನ್ಯರ ವಾದವನ್ನು ತಳ್ಳಿಹಾಕುವುದು ರೂಢಿ. ಚಾಮ್‌ಸ್ಕಿ ಇದಕ್ಕೆ ಒಂದು ಒಳ್ಳೆಯ ಉದಾಹರಣೆ ಕೊಡುತ್ತಾರೆ. ಎಲ್ಲರೂ ಪ್ರೀತಿಸುವ ಕ್ರಿಕೆಟ್ಟಿನಂತಹ ಪಂದ್ಯ ಮುಗಿದಾಗ ತಜ್ಞರು ಮಾಡುವ ವಿಶ್ಲೇಷಣೆಗೂ ಶ್ರೀಸಾಮಾನ್ಯರು ಮಾಡುವ ವಿಶ್ಲೇಷಣೆಗೂ ಮೂಲಭೂತವಾದ ವ್ಯತ್ಯಾಸ ಇಲ್ಲವೆನ್ನುವುದಾದರೆ, ಅದಕ್ಕೆ ಸಾಮಾನ್ಯರೂ ತಮ್ಮನ್ನು ತೊಡಗಿಸಿಕೊಂಡಿರುವುದೇ ಕಾರಣ. ಸಾಮಾನ್ಯರು ಒಂದು ಪಂದ್ಯದ ವಿಶ್ಲೇಷಣೆ ಮಾಡಬಹುದಾದರೆ ಅರ್ಥನೀತಿಯ ಬಗ್ಗೆ, ರಕ್ಷಣಾನೀತಿಯ ಬಗ್ಗೆ ತಮ್ಮ ಅಭಿಪ್ರಾಯವನ್ನು ಮಂಡಿಸಬಾರದೇಕೆ? ಮತ್ತು ಶ್ರೀಸಾಮಾನ್ಯರ ವಾದದಲ್ಲಿರಬಹುದಾದ ಹೂರಣವನ್ನು ಪರಿಗಣಿಸುವ ರೀತಿಯೇನು? ಈ ಹಿನ್ನಲೆಯಲ್ಲಿ ಚಾಮ್‌ಸ್ಕಿ, ಸಂಪಾದಕರಿಗೆ ಓದುಗರು ಬರೆಯು ಪತ್ರಗಳು ಅದೇ ಪತ್ರಿಕೆಯಲ್ಲಿ ಬರಬಹುದಾದ ತಜ್ಞರ ವಿಶ್ಲೇಷಣೆಯಷ್ಟೇ ಪ್ರಮುಖವಾದವು ಎನ್ನುತ್ತಾರೆ. ಇದು ನಿಜಕ್ಕೂ ವಿಚಾರಮಾಡಬೇಕಾದ ಸಂಗತಿಯೇ.

ಸಾಮಾನ್ಯವಾಗಿ ಯಾವುದೇ ದೇಶದ ಪ್ರಗತಿಯ ಮಾಪಕವಾಗಿ ಅರ್ಥವ್ಯವಸ್ಥೆಯ ಮಾಹಿತಿ ಸಿಗುತ್ತದೆ. ಆದರೆ, ಪ್ರತಿ ಪ್ರಗತಿಯ ಗಾಥೆಯಲ್ಲೂ ಅದನ್ನು ಸಾಧಿಸುವುದಕ್ಕೆ ತಮ್ಮ ಭೂಮಿಯನ್ನು ಕಳೆದುಕೊಂಡ ರೈತರು, ವ್ಯಾಪಾರ ಕೈಬಿಟ್ಟ ಸಣ್ಣವ್ಯಾಪಾರಿಗಳು, ಊರನ್ನೇ ಮುಳುಗಡೆಗೆ ಬಿಟ್ಟು ಅಣೆಕಟ್ಟನ್ನು ಕಟ್ಟಲು ಶರಣಾದ ಗ್ರಾಮಸ್ಥರ ಕಥೆಗಳು ನಮಗೆ ಮಾಹಿತಿಯಲ್ಲಿ ಸಿಗುವುದಿಲ್ಲ. ಅವರ ಕಥೆಗಳನ್ನು ನಾವು ಸಾಹಿತ್ಯದಲ್ಲಿ ಕಾಣಬೇಕಾಗುತ್ತದೆಂದು ಅರ್ಥಶಾಸ್ತ್ರಜ್ಞ ಎಡ್ಮಂಡ್ ಫೈಲ್ಪ್ಸ್ ಹೇಳುತ್ತಾರೆ. ಸಮಾಜ–ಸರ್ಕಾರ–ವ್ಯಾಪಾರಗಳ ತ್ರಿಕೋನದಲ್ಲಿ ಪರಂಪರಾಗತವಾಗಿ ಸಮಾಜವೇ ಅಡಿಪಾಯವಾಗಿ ಮೂಲಾಧಾರವಾಗಿ ಮುಖ್ಯಬಿಂದುವಾಗಿತ್ತು. ಆದರೆ, ಕ್ರಮೇಣ ಸಮಾಜದ ಪ್ರಾಥಮಿಕತೆಯನ್ನು ಸರ್ಕಾರ ಆಕ್ರಮಿಸಿಕೊಂಡಿತು. ಸಮಾಜವಾದದಿಂದ ಮಾರುಕಟ್ಟೆಯತ್ತ ನಾವು ಹೆಜ್ಜೆಯಿಡುತ್ತಿರುವಂತೆ ಆ ಪ್ರಾಥಮಿಕತೆ ಸರ್ಕಾರದಿಂದ ವ್ಯಾಪಾರದತ್ತ ಸಾಗಿದೆ ಎಂದು ರೋಹಿಣಿ ನಿಲೇಕಣಿ ತಮ್ಮ ಈಚಿನ ಪುಸ್ತಕದಲ್ಲಿ ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ ಚಾಮ್‌ಸ್ಕಿಯ ಜೊತೆಗಿನ ಮಾತುಕತೆಗಳ ಓದು ಮತ್ತು ಮರುಓದು ಬಹಳ ಮುಖ್ಯವಾದದ್ದಾಗುತ್ತದೆ. ನಾವು ಬಹಿರಂಗವಾಗಿ ಬದಲಾದಷ್ಟೂ ಅಸಮಾನತೆಯನ್ನು ಪೋಷಿಸುವ, ಪ್ರಗತಿಯನ್ನು ವ್ಯಾಪಾರದ ಚೌಕಟ್ಟಿನಲ್ಲಿ ಪರಿಭಾಷಿಸುವ, ಭಿನ್ನಾಭಿಪ್ರಾಯವನ್ನು ಲೂನಿ ಲೆಫ್ಟ್ ಎಂದು ತಿರಸ್ಕರಿಸುವ ಅಂತರಂಗವನ್ನು ಭದ್ರವಾಗಿ ಕಾಪಿರಿಸಿಕೊಂಡಿದ್ದೇವೆ.

ಭಾಷೆ ಯಾವ ರೀತಿಯಲ್ಲಿ ಕೆಲಸ ಮಾಡುತ್ತದೆ ಎನ್ನುವುದಕ್ಕೆ ಉದಾಹರಣೆಯಾಗಿ, 'ಎಡಪಂಥೀಯ' ಪದವನ್ನು ಒಂದು ವಿಚಾರಧಾರೆಯ ಪ್ರತೀಕವಾಗಿ ಉಪಯೋಗಿಸದೇ, ಒಂದು ಬೈಗುಳವಾಗಿ ಉಪಯೋಗಿಸುವ ರೀತಿಯೇ ಅದರ ರಾಜಕೀಯ ಆಯಾಮಗಳನ್ನು ತೋರಿಸಿಕೊಡುತ್ತದೆಂದು ಚಾಮ್‌ಸ್ಕಿ ಹೇಳುತ್ತಾರೆ. ನಮ್ಮ ಸಂದರ್ಭದಲ್ಲಿ 'ಲಿಬರಲ್' ಮತ್ತು 'ಸೆಕ್ಯುಲರ್' ಎನ್ನುವ ಎರಡೂ ಪದಗಳು ಈಗ ಬೈಗುಳವಾಗಿ ಪರಿವರ್ತಿತಗೊಂಡಿವೆ. 'ಉದಾರವಾದಿ' ಮತ್ತು 'ಧರ್ಮನಿರಪೇಕ್ಷ' ಎನ್ನುವ ಎರಡು ಉದಾತ್ತ ವಿಚಾರಗಳ ಅರ್ಥಪಲ್ಲಟದ ಹಿಂದಿರುವ ರಾಜಕೀಯವನ್ನು ಅರ್ಥಮಾಡಿಕೊಳ್ಳಲು ಚಾಮ್‌ಸ್ಕಿ ವಿಚಾರಗಳು ನಮಗೆ ಮಾರ್ಗದರ್ಶಕವಾಗಿ ನಿಂತಿವೆ.

●